# ಕರ್ನಾಟಕ ರಾಜ್ಯ ಮಹಿಳಾ ಆಯೋಗ ಬೆಂಗಳೂರು

ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯ ಮಹಿಳಾ ಆಯೋಗ ಅಧಿನಿಯಮ 1995ರ ಅಡಿಯಲ್ಲಿ ದಿನಾಂಕ:26/05/1995 ರಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗವನ್ನು ರಚಿಸಿದೆ.

## ಕಾರ್ಯಾರಂಭ :

- ಇದು ಶಾಸನಬದ್ದ ಆಯೋಗವಾಗಿದ್ದು ದಿನಾಂಕ:06/08/1996ರಿಂದ ಕಾರ್ಯ ನಿರ್ವಹಿಸಲು ಪ್ರಾರಂಭಿಸಿದೆ.

## ಆಯೋಗದ ರಚನೆ :

- ಸರ್ಕಾರ ನಾಮನಿರ್ದೇಶಿಸುವ ಒಬ್ಬರು ಮಹಿಳಾ ಅಧ್ಯಕ್ಷರು.
- ಆರು ಮಂದಿ ಸರ್ಕಾರೇತರ ಸದಸ್ಯರು.
- ನಾಲ್ವರು ಪದನಿಮಿತ್ತ ಸದಸ್ಯರು.
    - ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು
    - ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು
    - ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು.
    - ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲಿಸ್, ವರದಕ್ಷಿಣೆ ಕೋಶ, ಸಿ.ಓ.ಡಿ., ಬೆಂಗಳೂರು.

## ಆಯೋಗದ ಪ್ರಕಾರ್ಯಗಳು :

- ಮಹಿಳೆಯರ ಸಂವಿಧಾನಾತ್ಮಕ ಹಕ್ಕುಗಳನ್ನು ರಕ್ಷಿಸುವುದು.
- ಮಹಿಳೆಯರ ಹಕ್ಕುಗಳಿಗೆ ಸಂಬಂಧಿಸಿದಂತೆ ತಿದ್ದುಪಡಿ ಮಾಡಲು ಕಾಲ ಕಾಲಕ್ಕೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿವುದು.
- ಮಹಿಳೆಯರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿಚಾರಣೆ ಮಾಡುವುದು, ಈ ವಿಚಾರಣೆ ಮಾಡುವಾಗ ಸಿವಿಲ್ ನ್ಯಾಯಾಲಯವು 1908ರ ಸಿವಿಲ್ ಪ್ರಕ್ರಿಯ ಸಂಹಿತೆಯಡಿ (1908ರ ಕೇಂದ್ರ ಅಧಿನಿಯಮ 5) ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿದೆ.

**ಆಯೋಗದಿಂದ ಮಹಿಳೆಯರಿಗೆ ದೊರೆಯುವ ಸೌಲಭ್ಯಗಳು:**

1. **ಮಹಿಳಾ ಕಾನೂನುಗಳ ಬಗ್ಗೆ ಜಾಗೃತಿ ಶಿಬಿರ :** ಮಹಿಳಾ ಕಾನೂನುಗಳ ಬಗ್ಗೆ ಅರಿವು ಮೂಡಿಸುವ ಶಿಬಿರಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ನಡೆಸಲಾಗುತ್ತಿದೆ. ಈ ಕೆಳಕಂಡ ವಿಷಯಗಳ ಬಗ್ಗೆ * ಮಹಿಳೆಯರ ಸಂವಿಧಾನದ ಹಕ್ಕುಗಳು. * ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ರಕ್ಷಣೆ ಕಾಯ್ದೆ - 2005 * ಮಹಿಳೆಯರು ಕೆಲಸ ನಿರ್ವಹಿಸುತ್ತಿರುವ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ * ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವ ಕಾನೂನು * ಕೌಟುಂಬಿಕ ಕಾನೂನು : ವಿವಾಹ, ವರದಕ್ಷಿಣೆ, ವಿಚ್ಛೇಧನ, ಜೀವನಾಂಶ, ಮಕ್ಕಳ ಅಭಿರಕ್ಷೆ * ಮಹಿಳೆಯರಿಗೆ ಇರುವ ಆಸ್ತಿ ಹಕ್ಕುಗಳು.
2. **ಕೌಟುಂಬಿಕ ಸಲಹಾ ಕೇಂದ್ರ :** ಕೌಟುಂಬಿಕ ಸಲಹಾ ಕೇಂದ್ರದಲ್ಲಿ ನೊಂದ ಮಹಿಳೆಯರು ದೂರರ್ಜಿಗಳನ್ನು ಸಲ್ಲಿಸಿ ಸಮಾಲೋಚನೆ ಮೂಲಕ ಆದಷ್ಟು ಮಟ್ಟಿಗೆ ಈ ಕೆಳಕಂಡ ತೊಂದರೆಗಳಿಗೆ ಪರಿಹಾರ ಪಡೆಯುತ್ತಾರೆ. * ಕೌಟುಂಬಿಕ ಕಲಹಗಳು, * ಆಸ್ತಿಯ ವ್ಯಾಜ್ಯ ವಿವಾದಗಳು, *ವರದಕ್ಷಿಣೆಗೆ ಸಂಬಂಧಿಸಿದ ಸಮಸ್ಯೆಗಳು * ವಿವಾಹ ವಿಚ್ಛೇದನೆಗಳಲ್ಲಿ ಬಂದಂತಹ ತೊಂದರೆಗಳು, ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ವಲಯಗಳ ಮಹಿಳಾ ನೌಕರರು, ಕಾರ್ಯಕರ್ತೆಯರ ಮೇಲೆ ನಡೆಯುವ ದೌರ್ಜನ್ಯ ಹಾಗೂ ಲೈಂಗಿಕ ಕಿರುಕುಳ.

3. **<u>ಪಾರಿವಾರಿಕ್ ಲೋಕ್ ಅದಾಲತ್ :</u>** ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದೊಂದಿಗೆ ತಿಂಗಳಿಗೊಮ್ಮೆ ಕೌಟುಂಬಿಕ ನ್ಯಾಯಾಲಯದಲ್ಲಿ ಪಾರಿವಾರಿಕ್ ಮಹಿಳಾ ಅದಾಲತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಕೌಟುಂಬಿಕ ನ್ಯಾಯಾಲಯದಲ್ಲಿ ಬಹಳ ಕಾಲದಿಂದ ಇತ್ಯರ್ಥವಾಗದೆ ಉಳಿದಿದ್ದ ಕೌಟುಂಬಿಕ ಪ್ರಕರಣಗಳ ವ್ಯಾಜ್ಯಗಳನ್ನು ಪಾರಿವಾರಿಕ್ ಮಹಿಳಾ ಅದಾಲತ್‌ನಲ್ಲಿ ಸಮಾಲೋಚನೆ ನಡೆಸಿ ವ್ಯಾಜ್ಯಗಳನ್ನು ಬಗೆಹರಿಸಲಾಗುತ್ತಿದೆ.

4. **<u>ಲೈಂಗಿಕ ಕಿರುಕುಳ ತಡೆಗಟ್ಟಲು ಇರುವ ದೂರು ನಿವಾರಣ ಸಮಿತಿ ರಚನೆ ಬಗ್ಗೆ ಮೇಲ್ವಿಚಾರಣೆ:</u>** ಕರ್ನಾಟಕ ರಾಜ್ಯ ಮಹಿಳಾ ಆಯೋಗವು ಮಹಿಳೆಯರು ಕೆಲಸ ನಿರ್ವಹಿಸುತ್ತಿರುವ ಸ್ಥಳಗಳಲ್ಲಿ ಆಗುತ್ತಿರುವ ಲೈಂಗಿಕ ಕಿರುಕುಳ ದೂರು ನಿವಾರಣಾ ಸಮಿತಿಗಳ ರಚನೆ ಮೇಲುಸ್ತುವಾರಿ ನೋಡಿಕೊಳ್ಳುತ್ತಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿಯಲ್ಲಿ ಎರಡು ದೂರು ನಿವಾರಣಾ ಸಮಿತಿಗಳನ್ನು ರಚಿಸಲಾಗಿದ್ದು, ಈ ಸಮಿತಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಅಧೀನದಲ್ಲಿ ಬರುವ ಇಲಾಖೆಗಳಿಂದ ಸ್ವೀಕೃತವಾಗುವ ದೂರುಗಳ ವಿಚಾರಣೆಯನ್ನು ನಡೆಸಲಾಗುವುದು. ಹಾಗೂ ಎಲ್ಲಾ ನಿಗಮ:ಮಂಡಳಿ:ನಿರ್ದೇಶನಾಲಯಗಳಲ್ಲೂ ಸಹ ದೂರು ನಿವಾರಣಾ ಸಮಿತಿಗಳನ್ನು ರಚಿಸಲಾಗಿರುತ್ತದೆ.

5. **<u>ಕೌಟುಂಬಿಕ ನ್ಯಾಯಾಲಯಗಳಲ್ಲಿ ಮಹಿಳಾ ಸಹಾಯ ವೇದಿಕೆ :</u>** ರಾಜ್ಯದ ಏಳು ಜಿಲ್ಲೆಗಳಲ್ಲಿರುವ (ಬೆಂಗಳೂರು, ಮೈಸೂರು, ಗುಲ್ಬರ್ಗಾ, ರಾಯಚೂರು, ದಾವಣಗೆರೆ, ಬೆಳಗಾಂ, ಬಿಜಾಪುರ) ಕೌಟುಂಬಿಕ ನ್ಯಾಯಾಲಯಗಳಲ್ಲಿ ಮಹಿಳಾ ಸಹಾಯ ವೇದಿಕೆಗಳನ್ನು ಕರ್ನಾಟಕ ರಾಜ್ಯ ಮಹಿಳಾ ಆಯೋಗದಿಂದ ನಡೆಸಲಾಗುತ್ತಿದ್ದು, ಕೌಟುಂಬಿಕ ನ್ಯಾಯಾಲಯಗಳಲ್ಲಿ ಮಹಿಳೆಯರಿಗೆ ದಾವೆ ಹೂಡಲು ಸಹಾಯ : ಸಲಹೆ ನೀಡುವುದನ್ನು ಸಲಹೆಗಾರರು ಮಾಡುತ್ತಿದ್ದಾರೆ.

6. **<u>ಗರ್ಭಧಾರಣಾ ಪೂರ್ವ ಮತ್ತು ಪ್ರಸವ ಪೂರ್ವ ಲಿಂಗಪತ್ತೆ ತಂತ್ರಜ್ಞಾನ (ನಿಯಂತ್ರಣ ಮತ್ತು ತಡೆಗಟ್ಟುವಿಕೆ) ಅನುಷ್ಠಾನದಲ್ಲಿ ಸಕ್ಷಮ ಪ್ರಾಧಿಕಾರದ ಪಾತ್ರ :</u>** ಗರ್ಭಧಾರಣಾ ಪೂರ್ವ ಮತ್ತು ಪ್ರಸವ ಪೂರ್ವ ಲಿಂಗಪತ್ತೆ ತಂತ್ರಜ್ಞಾನ (ನಿಯಂತ್ರಣ ಮತ್ತು ತಡೆಗಟ್ಟುವಿಕೆ) ಕಾಯ್ದೆಯ 1994ರ ನಿಯಮ 30 ರಡಿಯಲ್ಲಿ ದಿನಾಂಕ:18-12-2001ರಂದು ಹೊರಡಿಸಿರುವ ಅಧಿಸೂಚನೆ ಸ:ಂಸಿ.ಎಸ್.ಎಸ್.ಎಂ/ 53/2001-02ರ ಪ್ರಕಾರ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಕಾರ್ಯದರ್ಶಿಯವರಿಗೆ ಅಸ್ಪತ್ರೆ ಮತ್ತು ಪ್ರಯೋಗ ಶಾಲೆಗಳಿಗೆ ಅನಿರೀಕ್ಷಿತ ಭೇಟಿ ನೀಡುವ ಬಗ್ಗೆ ಅಧಿಕಾರವನ್ನು ನೀಡಲಾಗಿದೆ.

7. **<u>ಸುರಕ್ಷಾ ಯೋಜನೆ :</u>** ಕರ್ನಾಟಕ ಸರ್ಕಾರವು ಈ ಯೋಜನೆಯಡಿ ಆದೇಶ ಹೊರಡಿಸಿದಂತೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದಿಂದ ಆ್ಯಸಿಡ್ ಹಾಗೂ ಸೀಮೆಎಣ್ಣೆ ದಾಳಿಗೆ ಒಳಗಾದ ಬಡ ಮಹಿಳೆಯರಿಗೆ ಅವರ ವೈದ್ಯಕೀಯ ಖರ್ಚುಗಳಿಗೆ ಹಾಗೂ ಪುನರ್ ವಸತಿಗಾಗಿ ಗಾಯದ ತೀವ್ರತೆಯ ಆಧಾರದ ಮೇಲೆ ಕನಿಷ್ಟ ರೂ.20,000/-ಗಳಿಂದ ಗರಿಷ್ಠ ರೂ.2,00,000/-ಗಳವರೆಗೆ ಪರಿಹಾರವನ್ನು ನೀಡಲಾಗುವುದು.

8. **<u>ಪೋಲೀಸ್ ಹಾಗೂ ಕಾನೂನು ಘಟಕಗಳು:</u>** ಕರ್ನಾಟಕ ರಾಜ್ಯ ಮಹಿಳಾ ಆಯೋಗದಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ವಿವಿಧ ದೂರರ್ಜಿಗಳು ಬರುತ್ತಿದ್ದು, ಅನೇಕ ಅರ್ಜಿದಾರರು ಸಲಹೆಗಳನ್ನು ಕೋರಿ ಬರುತ್ತಿರುತ್ತಾರೆ. ಈ ಕಾರಣದಿಂದ ಕರ್ನಾಟಕ ರಾಜ್ಯ ಮಹಿಳಾ ಆಯೋಗದಲ್ಲಿ ಒಂದು ಕಾನೂನು ಸಲಹಾ ವಿಭಾಗವನ್ನು ಮತ್ತು ಒಂದು ಪೋಲಿಸ್ ಸೆಲ್ ವಿಭಾಗವನ್ನು 2003-04ನೇ ಸಾಲಿನಿಂದ ತೆರೆಯಲಾಗಿದೆ. ಈ ಘಟಕಗಳಲ್ಲಿ ಅವಶ್ಯಕ ಸಲಹೆಗಳನ್ನು ನೀಡಲಾಗುತ್ತಿದೆ.

**ಆಯೋಗಕ್ಕೆ ಅರ್ಜಿ ಸಲ್ಲಿಸುವ ಪ್ರಕಾರ್ಯದ ಕುರಿತು :**

ಕರ್ನಾಟಕ ರಾಜ್ಯ ಮಹಿಳಾ ಆಯೋಗಕ್ಕೆ ದೂರರ್ಜಿಯನ್ನು ಸಲ್ಲಿಸಲು ಯಾವುದೇ ನಮೂನೆಯನ್ನು ನಿಗದಿಪಡಿಸಿರುವುದಿಲ್ಲ. ಯಾವುದೇ ತೊಂದರೆಯಲ್ಲಿರುವ ಮಹಿಳೆಯರು ಒಂದು ಬಿಳಿ ಹಾಳೆಯಲ್ಲಿ ಅಧ್ಯಕ್ಷರು / ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, 1ನೇ ಮಹಡಿ, ಕೆ.ಹೆಚ್.ಬಿ. ಕಟ್ಟಡ, ಕಾವೇರಿ ಭವನ, ಬೆಂಗಳೂರು ಇವರಿಗೆ ಅರ್ಜಿಯನ್ನು ಬರೆದು ಅರ್ಜಿದಾರರ ತೊಂದರೆ, ಅವರು ಆಯೋಗದಿಂದ ಯಾವ ರೀತಿಯ ಸಹಾಯವನ್ನು ಅಪೇಕ್ಷಿಸುತ್ತಾರೆಂದು ಬರೆದು ಕೊನೆಗೆ ಅವರ ಸಹಿಯನ್ನು ಹಾಕುವುದು. ಅರ್ಜಿದಾರರು ಅವರ ಹಾಗೂ ಪ್ರತಿವಾದಿಗಳ ಪೂರ್ಣ ಹೆಸರು, ವಿಳಾಸ, ದೂರವಾಣಿ, ಮೊಬೈಲ್ ಸಂಖ್ಯೆಯನ್ನು ನಮೂದಿಸುವುದು ಹಾಗೂ ಅವರ ಅರ್ಜಿಗೆ ಸಂಬಂಧಪಟ್ಟ ದಾಖಲಾತಿಗಳ ಪ್ರತಿಗಳನ್ನು ಲಗತ್ತಿಸಿ ಅವರೇ ಖುದ್ದಾಗಿ ಅಥವಾ ಪೋಸ್ಟ್/ಕೊರಿಯರ್ ಮುಖಾಂತರ ಆಯೋಗಕ್ಕೆ ಕಳುಹಿಸುವುದು.

**ಕರ್ನಾಟಕ ರಾಜ್ಯ ಮಹಿಳಾ ಆಯೋಗದ ವಿಳಾಸ, ದೂರವಾಣಿ, ಫ್ಯಾಕ್ಸ್ ಮತ್ತು ಈ-ಮೇಲ್ ವಿವರಗಳು :**

ಕರ್ನಾಟಕ ರಾಜ್ಯ ಮಹಿಳಾ ಆಯೋಗ, 1ನೇ ಮಹಡಿ, ಕರ್ನಾಟಕ ಗೃಹ ಮಂಡಳಿ ಕಟ್ಟಡ, ಕಾವೇರಿ ಭವನ, ಬೆಂಗಳೂರು-560009

**ದೂರವಾಣಿ**:080-22216485, 22216486, **ಫ್ಯಾಕ್ಸ್**:080-22216485,

**ಈ-ಮೇಲ್**:kscwbang@yahoo.co.in

## ಮೇಲ್ಮನವಿ ಪ್ರಾಧಿಕಾರ ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ವಿವರ:

| ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಈ ಕೆಳಕಂಡ ಅಧಿಕಾರಿಗಳನ್ನು ಮೇಲ್ಮನವಿ ಪ್ರಾಧಿಕಾರ ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ನೇಮಿಸಲಾಗಿದೆ. | | | | | | |
|---|---|---|---|---|---|---|
| **ಕ್ರ. ಸಂ** | **ಮೇಲ್ಮನವಿ ಪ್ರಾಧಿಕಾರ** | **ದೂರವಾಣಿ** | **ಫ್ಯಾಕ್ಸ್ ಸಂಖ್ಯೆ** | **ಸಾರ್ವಜನಿಕ ಮಾಹಿತಿ ಅಧಿಕಾರಿ** | **ದೂರವಾಣಿ** | **ಫ್ಯಾಕ್ಸ್ ಸಂಖ್ಯೆ** |
| 1 | ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಹಿಳಾ ಆಯೋಗ ಬೆಂಗಳೂರು | 22216485 | 22216485 | ಶಾಖಾಧಿಕಾರಿಗಳು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | 22216485 | 22216485 |

## ಅನುಬಂಧ - I

## ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರ ಶಾಖೆಯ ಸಿಬ್ಬಂದಿ ವಿವರಗಳು




ಕಾರ್ಯದರ್ಶಿಗಳು
ಕ.ರಾ.ಮ.ಆ., ಬೆಂಗಳೂರು

## ಅಧಿಕಾರ ವ್ಯಾಪ್ತಿ ಮತ್ತು ಕರ್ತವ್ಯಗಳು

ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು, ಸದಸ್ಯರುಗಳು ಹಾಗೂ ಸಿಬ್ಬಂದಿಗಳು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧಿನಿಯಮ 1995ರ ಪ್ರಕಾರ ಸರ್ಕಾರದಿಂದ ದತ್ತವಾದ ಅಧಿಕಾರ ವ್ಯಾಪ್ತಿಯಲ್ಲಿ ತಮಗೆ ವಹಿಸಿದ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

**ಎ. ಅಧ್ಯಕ್ಷರ ಹಾಗೂ ಅವರ ಶಾಖೆಯ ಸಿಬ್ಬಂದಿಗಳ ಕಾರ್ಯ ನಿರ್ವಹಣೆ ವಿವರ ಈ ಕೆಳಕಂಡಂತಿದೆ :**

| ಕ್ರ.ಸಂ | ಹುದ್ದೆ | ನಿರ್ವಹಣೆ |
|---|---|---|
| 1 | ಅಧ್ಯಕ್ಷರು | ಕರ್ನಾಟಕ ರಾಜ್ಯ ಮಹಿಳಾ ಆಯೋಗ ಅಧಿನಿಯಮ 1995ರ ಪ್ರಕಾರ ಅಧ್ಯಕ್ಷರು ಈ ಕೆಳಗಿನ ಪ್ರಕಾರ್ಯಗಳನ್ನು ನಿರ್ವಹಿಸುವರು:<br>(ಎ) ಸಂವಿಧಾನ ಮತ್ತು ಇತರೆ ಕಾನೂನುಗಳಲ್ಲಿ ಮಹಿಳೆಯರಿಗಾಗಿ ಕಲ್ಪಿಸಲಾಗಿರುವ ರಕ್ಷಣೋಪಾಯಗಳಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳ ವಿಚಾರಣೆ ನಡೆಸುವುದು ಮತ್ತು ಪರಿಶೀಲಿಸುವುದು;<br>(ಬಿ) ಅಂಥ ರಕ್ಷಣೋಪಾಯಗಳ ಕಾರ್ಯ ರೀತಿಯ ಬಗ್ಗೆ ವರದಿಗಳನ್ನು ವಾರ್ಷಿಕವಾಗಿ ಮತ್ತು ಆಯೋಗವು ಸೂಕ್ತವೆಂದು ಪರಿಗಣಿಸಬಹುದಾದಂಥ ಇತರ ಸಮಯಗಳಲ್ಲಿ ಸರ್ಕಾರಕ್ಕೆ ಸಲ್ಲಿಸುವುದು;<br>(ಸಿ) ಅಂತಹ ವರದಿಗಳಲ್ಲಿ ಮಹಿಳೆಯರ ಸ್ಥಿತಿಗತಿಗಳನ್ನು ಸುಧಾರಿಸಲು ಸರ್ಕಾರವು ಅಂತಹ ರಕ್ಷಣೋಪಾಯಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಬಗ್ಗೆ ಶಿಫಾರಸ್ಸುಗಳನ್ನು ಮಾಡುವುದು;<br>(ಡಿ) ತನ್ನ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಸರ್ಕಾರಿ ಇಲಾಖೆಗಳು ಹಾಗೂ ಅದರ ಏಜೆನ್ಸಿ ಗಳೊಂದಿಗಷ್ಟೆ ಅಲ್ಲದೆ ರಾಜ್ಯದಲ್ಲಿನ ಸ್ವಯಂ ಸೇವಾ ಸಂಸ್ಥೆಗಳು ಅದರಲ್ಲೂ ಮುಖ್ಯವಾಗಿ ಮಹಿಳಾ ಸಂಸ್ಥೆಗಳೊಂದಿಗೆ ಸಹ ತೊಡಗಿಸಿಕೊಳ್ಳುವುದು. |
| 2 | ಶೀಘ್ರಲಿಪಿಗಾರರು(1ಹುದ್ದೆ) | ಅಧ್ಯಕ್ಷರು ಕೊಡುವ ಉಕ್ತಲೇಖನ (Dictation) ತೆಗೆದುಕೊಂಡು ಪತ್ರಗಳನ್ನು ಮಂಡಿಸುವುದು, ಅಧ್ಯಕ್ಷರು ಸೂಚಿಸಿದ ಕೆಲಸ ಹಾಗೂ ಅವರ ಸಹಾಯಕರಾಗಿ ಕಾರ್ಯ ನಿರ್ವಹಿಸುವುದು. |
| 3 | ಬೆರಳಚ್ಚುಗಾರರು(1 ಹುದ್ದೆ) | ಅಧ್ಯಕ್ಷರ ಶಾಖೆಗೆ ಸಂಬಂಧಿಸಿದಂತೆ ಕಡತಗಳ ನಿರ್ವಹಣೆ ಹಾಗೂ ಬೆರಳಚ್ಚು ಕೆಲಸ ನಿರ್ವಹಿಸುವುದು. ರಾಮನಗರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ನಗರ ಜಿಲ್ಲೆಗಳಿಗೆ ಸಂಬಂಧಪಟ್ಟ ದೂರರ್ಜಿಗಳ ಕಡತಗಳನ್ನು ನಿರ್ವಹಿಸುವುದು. |
| 4 | ವಾಹನ ಚಾಲಕರು(1ಹುದ್ದೆ ) | ಅಧ್ಯಕ್ಷರ ವಾಹನ ಚಾಲಕರಾಗಿ ಕಾರ್ಯ ನಿರ್ವಹಿಸುವುದು |
| 5 | 'ಡಿ' ಗ್ರೂಪ್ ನೌಕರರು<br>(1 ಹುದ್ದೆ) | ಅಧ್ಯಕ್ಷರ ವಿಭಾಗದ ಕಡತಗಳನ್ನು ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ ಕೊಡುವುದು, ಟಪ್ಪಾಲುಗಳನ್ನು ರವಾನಿಸುವುದು, ಅಧ್ಯಕ್ಷರು ನಿರ್ದೇಶಿಸುವ ಇನ್ನಿತರೆ ಕೆಲಸಗಳನ್ನು ನಿರ್ವಹಿಸುವುದು. |

## ಬಿ. ಕಾರ್ಯದರ್ಶಿಗಳ ಹಾಗೂ ಅವರ ಶಾಖೆಯ ಸಿಬ್ಬಂದಿಗಳ ಕಾರ್ಯ ನಿರ್ವಹಣೆ ವಿವರ ಈ ಕೆಳಕಂಡಂತಿದೆ :

| ಕ್ರ. ಸಂ. | ಹುದ್ದೆ | ನಿರ್ವಹಣೆ |
|---|---|---|
| 1 | ಕಾರ್ಯದರ್ಶಿಗಳು | ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಾರೆ ಮತ್ತು :-<br>(ಎ) ಆಯೋಗದ ಅನುದಾನವನ್ನು ನಿರ್ವಹಿಸುತ್ತಾರೆ.<br>(ಬಿ) ಆಯೋಗದ ಲೆಕ್ಕಪತ್ರವನ್ನು ನಿರ್ವಹಿಸುವಂತೆ ಮಾಡುತ್ತಾರೆ.<br>(ಸಿ) ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧಿನಿಯಮ 1995ರ ಪ್ರಕಾರ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ಅಥವಾ ಅದರಡಿ ಅವರಿಗೆ ದತ್ತವಾದಂಥ ಇತರ ಪ್ರಕಾರ್ಯಗಳಾದಂತಹ ಮಹಿಳೆಯರಿಗೆ ಸಂಬಂಧಪಡುವ ಎಲ್ಲಾ ವಿಷಯಗಳ ವಿಚಾರಣೆಗಳನ್ನು ನಡೆಸುವುದು ಮತ್ತು ಪರಿಶೀಲಿಸುವುದು, ಮಹಿಳೆಯರ ಸ್ಥಿತಿಗತಿಗಳನ್ನು ಸುಧಾರಿಸಲು ರಕ್ಷಣೋಪಾಯಗಳನ್ನು ಅನುಷ್ಠಾನಕ್ಕೆ ತರಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು, ಮಹಿಳೆಯರ ಮೇಲೆ ತೋರುವ ತಾರತಮ್ಯ ಮತ್ತು ದೌರ್ಜನ್ಯಗಳ ವಿಚಾರಣೆ ನಡೆಸಲು ಕರೆ ನೀಡುವುದು. |
| 2 | ಶಾಖಾಧಿಕಾರಿಗಳು<br>(1 ಹುದ್ದೆ) | ಆಯೋಗದ ಎಲ್ಲಾ ಪ್ರಕರಣಗಳ ಶಾಖೆಯ ಕಡತಗಳನ್ನು ಪರಿಶೀಲಿಸಿ ಕಾರ್ಯದರ್ಶಿಗಳಿಗೆ ಮಂಡಿಸುವುದು, ಕಾರ್ಯದರ್ಶಿಗಳು ಸೂಚಿಸುವ ಎಲ್ಲಾ ಕೆಲಸಗಳನ್ನು ನಿರ್ವಹಿಸುವುದು, ಕಾರ್ಯದರ್ಶಿಗಳಿಗೆ ಸಹಾಯಕರಾಗಿ ಕೆಲಸ ನಿರ್ವಹಿಸುವುದು. |
| 3 | ಶೀಘ್ರಲಿಪಿಗಾರರು ಹಾಗೂ ಕಾರ್ಯದರ್ಶಿಗಳ ಆಪ್ತ ಸಹಾಯಕರು<br>(1 ಹುದ್ದೆ) | ಕಾರ್ಯದರ್ಶಿಗಳು ಕೊಡುವ ಉಕ್ತಲೇಖನ (Dictation) ತೆಗೆದುಕೊಂಡು ಪತ್ರಗಳನ್ನು ಮಂಡಿಸುವುದು, ಕಾರ್ಯದರ್ಶಿಗಳು ಸೂಚಿಸಿದ ಕೆಲಸ ಹಾಗೂ ಅವರ ಆಪ್ತ ಸಹಾಯಕರಾಗಿ ಕಾರ್ಯ ನಿರ್ವಹಿಸುವುದು. |
| 4 | ಪೊಲೀಸ್ ಸಲಹೆಗಾರರು<br>(1 ಹುದ್ದೆ) | ಪೊಲೀಸ್ ಇಲಾಖೆಗೆ ಸಂಬಂಧಪಟ್ಟ ಪ್ರಕರಣಗಳು ಅಂದರೆ ವರದಕ್ಷಿಣೆ ಕಿರುಕುಳ, ವರದಕ್ಷಿಣೆ ಸಾವು, ಅತ್ಯಾಚಾರ, ಕೊಲೆ, ಹಣವಂಚನೆ, ಮೋಸ ಹಾಗೂ ಆ್ಯಸಿಡ್ ದಾಳಿಗೆ ತುತ್ತಾದ ಪ್ರಕರಣಗಳ ಕಡತಗಳನ್ನು ನಿರ್ವಹಿಸುವುದು, ಪೊಲೀಸ್ ಇಲಾಖೆಗೆ ದೂರವಾಣಿಯ ಮೂಲಕ ಮಹಿಳೆಯರ ಪ್ರಕರಣಗಳನ್ನು ನೋಂದಣಿ ಮಾಡಿಕೊಳ್ಳುವಂತೆ ಸೂಚಿಸುವುದು, ಮಹಿಳೆಯರ ಪ್ರಕರಣಗಳ ಇತ್ಯರ್ಥಗಳನ್ನು ಆದಷ್ಟು ಶೀಘ್ರವಾಗಿ ಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆಗೆ ಪತ್ರ ವ್ಯವಹಾರ ಮಾಡಲು ಕರಡನ್ನು ತಯಾರಿಸಿ ಕಾರ್ಯದರ್ಶಿಗಳಿಗೆ ಮಂಡಿಸುವುದು ಹಾಗೂ ಅವರ ಸಹಾಯಕರಾಗಿ ಕಾರ್ಯ ನಿರ್ವಹಿಸುವುದು. |
| 5 | ಕಾನೂನು ಸಲಹೆಗಾರರು<br>(1 ಹುದ್ದೆ) | ಮಹಿಳೆಯರ ಸಮಸ್ಯೆಗೆ ಸಂಬಂಧಿಸಿದಂತೆ ಕಾನೂನು ಸಲಹೆ ಹಾಗೂ ಸೂಚನೆಯನ್ನು ನೀಡುವುದು, ಮಹಿಳೆಯರಿಗೆ ಕಾನೂನಿನ ಬಗ್ಗೆ ಅರಿವನ್ನು ಮೂಡಿಸುವುದು, ಕಾನೂನುಗಳಲ್ಲಿ ತಿದ್ದುಪಡಿಗೆ ಶಿಫಾರಸ್ಸು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲು ಕರಡನ್ನು ತಯಾರಿಸಿ ಕಾರ್ಯದರ್ಶಿಗಳಿಗೆ ಮಂಡಿಸುವುದು ಹಾಗೂ ಅವರ ಸಹಾಯಕರಾಗಿ ಕಾರ್ಯ ನಿರ್ವಹಿಸುವುದು. |

| | | |
|---|---|---|
| 6 | ಕಾರ್ಯಕ್ರಮ ಸಂಯೋಜಕರು (2 ಹುದ್ದೆ) | ಕಾರ್ಯಾಗಾರಗಳು ಹಾಗೂ ಕಾನೂನು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಕೆಲಸ ನಿರ್ವಹಣೆ, ಪ್ರಕರಣಗಳ ಸಮಾಲೋಚನೆಗಾಗಿ ಅರ್ಜಿದಾರರು ಹಾಗೂ ಎದುರುದಾರರನ್ನು ಆಯೋಗದ ಕಛೇರಿಗೆ ಕರೆಯಿಸಿ ಆಯೋಗದಲ್ಲಿ ಸಮಾಲೋಚನೆ ನಡೆಸುವುದು ಮತ್ತು ಸಮಾಲೋಚನೆಯಲ್ಲಿ ಆದ ಚರ್ಚೆಯ ವಿವರಗಳನ್ನು ಕಾರ್ಯದರ್ಶಿಗಳಿಗೆ ವಿವರಿಸಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ಕಾರ್ಯದರ್ಶಿಗಳಿಗೆ ಸಹಾಯ ಒದಗಿಸುವುದು. ಶಿವಮೊಗ್ಗ , ಧಾರವಾಡ, ಹಾಸನ, ಚಿತ್ರದುರ್ಗ, ಬೆಂಗಳೂರು ನಗರ, ಬಿಜಾಪುರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಬಾಗಲಕೋಟೆ ಮತ್ತು ಬಳ್ಳಾರಿ ಜಿಲ್ಲೆಗಳ ದೂರರ್ಜಿಗಳ ಕಡತಗಳನ್ನು ನಿರ್ವಹಣೆ. |
| 7 | ಪ್ರಥಮ ದರ್ಜೆ ಸಹಾಯಕರು (1 ಹುದ್ದೆ) | ದಾವಣಗೆರೆ, ಗದಗ ಜಿಲ್ಲೆಗಳಿಂದ ಹಾಗೂ ಬೇರೆ ರಾಜ್ಯಗಳಿಂದ ಬಂದಂತಹ ಮಹಿಳೆಯರ ಪ್ರಕರಣಗಳ ಕಡತ ನಿರ್ವಹಣೆ, ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಕಾರ್ಯದರ್ಶಿಗಳಿಗೆ ಕಡತವನ್ನು ಮಂಡಿಸುವುದು, ಸರ್ಕಾರದಿಂದ ಹಾಗೂ ಮಾನ್ಯ ಮಂತ್ರಿಗಳಿಂದ ಬಂದ ಪತ್ರಗಳ ಕಡತ ನಿರ್ವಹಿಸುವುದು, ಕೆಲಸ ನಿರ್ವಹಿಸುತ್ತಿರುವ ಸ್ಥಳಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ದೂರು ನಿವಾರಣಾ ಸಮಿತಿ ರಚನೆಯ ಮೇಲ್ವಿಚಾರಣೆ ಕಡತಗಳ ಹಾಗೂ ದೂರರ್ಜಿಯ ಕಡತಗಳ ನಿರ್ವಹಣೆ. |
| 8 | ಅಕೌಂಟೆಂಟ್ (1 ಹುದ್ದೆ) | ಅನುದಾನ ಕಡತ, ನಗದು ಪುಸ್ತಕ, ಚೆಕ್ ರಿಜಿಸ್ಟರ್, ಓಚರ್ ಕಡತ, ಕಾರ್ಯಕ್ರಮಗಳ ಖರ್ಚು ವೆಚ್ಚಗಳ ಕಡತ, ಸಿಬ್ಬಂದಿಗಳ ವೈಯಕ್ತಿಕ ಕಡತ, ರಜೆ ಮಂಜೂರಾತಿ ಕಡತಗಳನ್ನು ನಿರ್ವಹಿಸುವುದು ಹಾಗೂ ಕಾರ್ಯದರ್ಶಿಗಳಿಗೆ ಸಹಾಯಕರಾಗಿ ಕಾರ್ಯ ನಿರ್ವಹಿಸುವುದು. |
| 9 | ದ್ವಿತೀಯ ದರ್ಜೆ ಸಹಾಯಕರು (1 ಹುದ್ದೆ) | ಆಯೋಗಕ್ಕೆ ಬಂದ ಪತ್ರಗಳನ್ನು ಕಾರ್ಯದರ್ಶಿಯವರ ಮತ್ತು ಶಾಖಾಧಿಕಾರಿಗಳ ನಿರ್ದೇಶನದಂತೆ ಸಂಬಂಧಿಸಿದ ಶಾಖೆಗಳಿಗೆ ನೀಡುವುದು, ಸ್ವೀಕೃತಿ ಮತ್ತು ರವಾನೆ ಪುಸ್ತಕಗಳ ನಿರ್ವಹಣೆ, ಆಯೋಗದಿಂದ ಕಳುಹಿಸುವ ಎಲ್ಲಾ ಪತ್ರಗಳ ರವಾನೆಯ ಕೆಲಸ ನಿರ್ವಹಣೆ, ಸ್ಟೇಶನರಿ ಕಡತ ನಿರ್ವಹಣೆ. ಕೊಡಗು ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಸಂಬಂಧಪಟ್ಟ ದೂರರ್ಜಿಗಳ ಕಡತ ನಿರ್ವಹಣೆ. |
| 10 | ಬೆರಳಚ್ಚುಗಾರರು (2 ಹುದ್ದೆ) | ಆಯೋಗದಲ್ಲಿ ಎಲ್ಲಾ ಶಾಖೆಯ ವಿಷಯ ನಿರ್ವಾಹಕರು ಕಾರ್ಯದರ್ಶಿಗಳಿಂದ ಪ್ರಕರಣಗಳ ಇತ್ಯರ್ಥಕ್ಕಾಗಿ ಸಿದ್ಧಪಡಿಸಿದ ಕರಡನ್ನು ಅನುಮೋದನೆ ಪಡೆದ ನಂತರ ಆ ಕರಡುಗಳ ಬೆರಳಚ್ಚು ಮಾಡುವುದು. ಬೀದರ್ ಮತ್ತು ಕೊಪ್ಪಳ ಜಿಲ್ಲೆಗಳಿಗೆ ಸಂಬಂಧಪಟ್ಟ ದೂರರ್ಜಿಗಳ ಕಡತ ನಿರ್ವಹಣೆ. |
| 11 | ವಾಹನ ಚಾಲಕರು (1 ಹುದ್ದೆ) | ಸದಸ್ಯ ಕಾರ್ಯದರ್ಶಿಗಳ ವಾಹನ ಚಾಲಕರಾಗಿ ಕಾರ್ಯನಿರ್ವಹಿಸುವುದು. |
| 12 | 'ಡಿ' ಗ್ರೂಪ್ ನೌಕರರು (2 ಹುದ್ದೆ) | ಕಾರ್ಯದರ್ಶಿಗಳ ವಿಭಾಗದ ಕಡತಗಳನ್ನು ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ ಕೊಡುವುದು, ಟಪ್ಪಾಲುಗಳನ್ನು ರವಾನಿಸುವುದು, ಕಾರ್ಯದರ್ಶಿಗಳು ನಿರ್ದೇಶಿಸುವ ಇನ್ನಿತರೆ ಕೆಲಸಗಳನ್ನು ನಿರ್ವಹಿಸುವುದು. |

## ಸಿ. ಕೌಟುಂಬಿಕ ಸಲಹಾ ಕೇಂದ್ರದ ಸಿಬ್ಬಂದಿಗಳು:

| ಕ್ರ. ಸಂ. | ಹುದ್ದೆ | ನಿರ್ವಹಣೆ |
|---|---|---|
| 1 | ಸಲಹೆಗಾರರು (2 ಹುದ್ದೆಗಳು) | ಕರ್ನಾಟಕ ರಾಜ್ಯ ಮಹಿಳಾ ಆಯೋಗದಲ್ಲಿ ಸ್ವೀಕರಿಸಲಾಗುವ ಕೌಟುಂಬಿಕ ಸಮಸ್ಯೆಗಳ ಅರ್ಜಿಗಳಿಗೆ ಸಂಬಂಧಿಸಿದಂತೆ ಅರ್ಜಿದಾರರು ಹಾಗೂ ಎದುರುದಾರರನ್ನು ಆಯೋಗಕ್ಕೆ ಕರೆಯಿಸಿ ಕಾರ್ಯದರ್ಶಿಗಳ ನೇತೃತ್ವದಲ್ಲಿ ಸಮಾಲೋಚನೆ ನಡೆಸುವುದು. ಮೈಸೂರು, ತುಮಕೂರು, ಕೋಲಾರ, ಮಂಡ್ಯ, ಬೆಂಗಳೂರು ಗ್ರಾಮೀಣ, ಬೆಂಗಳೂರು ನಗರ, ಬೆಳಗಾಂ, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಿಗೆ ಸಂಬಂಧಪಟ್ಟ ದೂರರ್ಜಿಗಳ ಕಡತಗಳನ್ನು ನಿರ್ವಹಿಸುವುದು. |
| 2 | ದ್ವಿತೀಯ ದರ್ಜೆ ಸಹಾಯಕರು/ ಬೆರಳಚ್ಚುಗಾರರು (1 ಹುದ್ದೆ) | ಕೌಟುಂಬಿಕ ಸಲಹಾ ಕೇಂದ್ರಕ್ಕೆ ಸಂಬಂಧಿಸಿದಂತೆ ಕಡತಗಳ ನಿರ್ವಹಣೆ ಹಾಗೂ ಬೆರಳಚ್ಚು ಕೆಲಸಗಳನ್ನು ನಿರ್ವಹಿಸುವುದು. ಚಾಮರಾಜನಗರ ಜಿಲ್ಲೆಯ ದೂರರ್ಜಿಗಳ ಕಡತಗಳನ್ನು ನಿರ್ವಹಿಸುವುದು. |
| 3 | 'ಡಿ' ಗುಂಪಿನ ನೌಕರರು (1 ಹುದ್ದೆ) | ಕೌಟುಂಬಿಕ ಸಲಹಾ ಕೇಂದ್ರಕ್ಕೆ ಸಂಬಂಧಪಟ್ಟ ಕಡತಗಳನ್ನು ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ ಕೊಡುವುದು, ಟಪ್ಪಾಲುಗಳನ್ನು ರವಾನಿಸುವುದು, ಕಾರ್ಯದರ್ಶಿಗಳು ನಿರ್ದೇಶಿಸುವ ಇನ್ನಿತರೆ ಕೆಲಸಗಳನ್ನು ನಿರ್ವಹಿಸುವುದು. |

## ಅಧಿಕಾರಿಗಳ ಮತ್ತು ಸಿಬ್ಬಂದಿಯ ಡೈರೆಕ್ಟರಿ:

| ಕ್ರ.ಸಂ | ಹೆಸರು ಮತ್ತು ಹುದ್ದೆ | ದೂರವಾಣಿ ಸಂಖ್ಯೆ ಕಛೇರಿ |
|---|---|---|
| 1 | ಡಾ: ಡಿ.ಎಸ್. ಅಶ್ವಥ್, ಭಾ. ಆ. ಸೇ.,<br>ಅಧ್ಯಕ್ಷರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ ಹಾಗೂ ಸರ್ಕಾರದ ಕಾರ್ಯದರ್ಶಿಗಳು,<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು | 22216486 |
| 2 | ಶ್ರೀಮತಿ ಕೆ. ಪಾರ್ವತಿ ತಿಮ್ಮಯ್ಯ, ಕ. ಆ. ಸೇ (ಆಯ್ಕೆ ಶ್ರೇಣಿ ಅಧಿಕಾರಿ)<br>ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಹಿಳಾ ಆಯೋಗ,ಬೆಂಗಳೂರು | 22216485 |
| 3 | ಡಾ: ಪುಷ್ಪಾ ಎಂ. ,<br>ಶಾಖಾಧಿಕಾರಿಗಳು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | 22216485 |
| 4 | ಶ್ರೀಮತಿ ಎಂ. ಕೆ. ಲಲಿತ,<br>ಶೀಘ್ರಲಿಪಿಗಾರರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | 22216485 |
| 5 | ಶ್ರೀಮತಿ ಸಿದ್ದಮ್ಮ. ಎ. ಕೆ.,<br>ಪೋಲಿಸ್ ಸಲಹೆಗಾರರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | 22216485 |
| 6 | ಶ್ರೀಮತಿ ವೀಣಾ ಮುಚ್ಚಂಡಿ,<br>ಪ್ರಥಮ ದರ್ಜೆ ಸಹಾಯಕರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | 22216485 |
| 7 | ಶ್ರೀ ದಿನಕರ ಶೆಟ್ಟಿ,<br>ಲೆಕ್ಕಿಗರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | 22216485 |
| 8 | ಕು. ಸೌಭಾಗ್ಯ. ಕೆ.,<br>ಕಾರ್ಯಕ್ರಮ ಸಂಯೋಜಕರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | 22216485 |
| 9 | ಶ್ರೀಮತಿ ಶೋಭಾ. ಎ. ಸಿ.,<br>ಕಾರ್ಯಕ್ರಮ ಸಂಯೋಜಕರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | 22216485 |

| | | |
|---|---|---|
| 10 | ಶ್ರೀಮತಿ ಆರತಿ,<br>ದ್ವಿತೀಯ ದರ್ಜೆ ಸಹಾಯಕರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | 22216485 |
| 11 | ಕು. ಚಂದ್ರಕಲಾ. ಕೆ.,<br>ರವಾನೆ ಸಹಾಯಕರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | 22216485 |
| 12 | ಶ್ರೀ ಬಸವರಾಜ್.ಸಿ.,<br>ಬೆರಳಚ್ಚುಗಾರರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | 22216485 |
| 13 | ಶ್ರೀಮತಿ ಆರ್. ಪ್ರೇಮಕುಮಾರಿ,<br>ಬೆರಳಚ್ಚುಗಾರರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | 22216485 |
| 14 | ಕು. ಜಯಮಾಲ,<br>ಬೆರಳಚ್ಚುಗಾರರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | 22216485 |
| 15 | ಖಾಲಿ ಹುದ್ದೆ<br>ವಾಹನ ಚಾಲಕರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | - |
| 16 | ಶ್ರೀಮತಿ ಅನಸೂಯಮ್ಮ,<br>'ಡಿ' ಗ್ರೂಪ್ ನೌಕರರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | 22216485 |
| 17 | ಶ್ರೀಮತಿ ವರಲಕ್ಷ್ಮಿ,<br>'ಡಿ' ಗ್ರೂಪ್ ನೌಕರರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | 22216485 |
| 18 | ಶ್ರೀ ವಿ. ಪ್ರಕಾಶ್ ಕುಮಾರ್,<br>'ಡಿ' ಗ್ರೂಪ್ ನೌಕರರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | 22216485 |

**ಕೌಟುಂಬಿಕ ಸಲಹಾ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳು :**

| ಕ್ರ.ಸಂ | ಹೆಸರು ಮತ್ತು ಹುದ್ದೆ | ದೂರವಾಣಿ ಸಂಖ್ಯೆ ಕಛೇರಿ |
|---|---|---|
| 1 | ಶ್ರೀಮತಿ ರಶ್ಮಿ. ಕೆ.ಪಿ.,<br>ಸಲಹೆಗಾರರು, ಕೌಟುಂಬಿಕ ಸಲಹಾ ಕೇಂದ್ರ, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | 22216485 |
| 2 | ಶ್ರೀ ಸತೀಶ್ ಕುಮಾರ್. ಕೆ.ಎನ್.,<br>ಸಲಹೆಗಾರರು, ಕೌಟುಂಬಿಕ ಸಲಹಾ ಕೇಂದ್ರ, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | 22216485 |
| 3 | ಶ್ರೀಮತಿ ಕೆ. ಕವಿತ,<br>ಬೆರಳಚ್ಚುಗಾರರು, ಕೌಟುಂಬಿಕ ಸಲಹಾ ಕೇಂದ್ರ, ಕರ್ನಾಟಕ ರಾಜ್ಯ ಮಹಿಳಾ ಆಯೋಗ,ಬೆಂಗಳೂರು | 22216485 |
| 4 | ಒಂದು ಖಾಲಿ ಹುದ್ದೆ<br>'ಡಿ' ಗ್ರೂಪ್ ನೌಕರರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು | - |

ಕಾರ್ಯದರ್ಶಿಗಳು

ಕ.ರಾ.ಮ.ಆ., ಬೆಂಗಳೂರು